# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

**ಸಿ.ಸಿ ನಂಬರ 1409/2023**

ಸಿ.ಡಬ್ಲೂಃ 01

ಸಾಕ್ಷಿದಾರರ ಹೆಸರುಃ ಶ್ರೀ.ಲಕ್ಷ್ಮಣನಾಯ್ಕ ತಂದೆಃಸಕ್ರ್ಯಾನಾಯ್ಕ
ವಯಸ್ಸುಃ 40 ವರ್ಷ

ದಿಃ **17-06-2026** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಪಾಟೀ ಸವಾಲು ಆರೋಪಿ ಪರ ಶ್ರೀ.**ARJ** ವಕೀಲರವರಿಂದಃ

**01.** ನಾನು ಈ ಪ್ರಕರಣವನ್ನು ದುಡ್ಡಿಗಾಗಿ ಹಾಕಿರುತ್ತೇನೆ. ಯಾವ ಪರಿಹಾರಕ್ಕಾಗಿ ನ್ಯಾಯಾಲಯಕ್ಕೆ ಹಾಕಿರುತ್ತೀರಿ ಎಂದರೆ **2** ತಿಂಗಳ ಹಿಂದೆ ಆರೋಪಿತನು ದುಡ್ಡನ್ನು ನಮ್ಮಿಂದ ತೆಗೆದುಕೊಂಡಿದ್ದು ಅದಕ್ಕಾಗಿ ಚೆಕ್ಕನ್ನು ಕೊಟ್ಟಿದ್ದನು ಅದಕ್ಕಾಗಿ ನ್ಯಾಯಾಲಯಕ್ಕೆ ಹಾಕಿರುತ್ತೇನೆ. ನನ್ನದು ಸರ್ಕಾರದವರು ಕೊಟ್ಟ ಬಿ.ಪಿ.ಎಲ್. ಕಾರ್ಡ್ ಇರುತ್ತದೆ. ಬಿ.ಪಿ.ಎಲ್. ಕಾರ್ಡನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಹಾಜರು ಪಡಿಸುತ್ತೇನೆ. ನಾನು ಸರ್ಕಾರಕ್ಕೆ ಆಧಾಯ ತೆರಿಗೆ ಪಾವತಿ ಮಾಡುವುದಿಲ್ಲ. ವರ್ಷಕ್ಕೆ **1,00,000/-** ರಿಂದ **1,50,000/-** ನಮ್ಮ ಭೂಮಿಯಿಂದ ಬಂದ ಆದಾಯದಿಂದ ಆರೋಪಿತನಿಗೆ ಹಣವನ್ನು ನೀಡಿರುತ್ತೇನೆ. ನಾವು ಒಟ್ಟು ಕುಟುಂಬದಲ್ಲಿ ವಾಸವಿರುತ್ತೇವೆ. ನಮ್ಮ ಒಟ್ಟು ಕುಟುಂಬಕ್ಕೆ **4** ಎಕರೆ ಭೂಮಿ ಇರುತ್ತದೆ. ಆ **4** ಎಕರೆ ಭೂಮಿಯು ನನ್ನ ದೊಡ್ಡಪ್ಪನ ಹೆಸರಿನಲ್ಲಿ ಇರುತ್ತದೆ. ಇಂದಿಗೂ ಸಹ ನನ್ನ ಹೆಸರಿಗೆ ಯಾವುದೇ ಭೂಮಿ ಇರುವುದಿಲ್ಲ.

**02.** ನಮ್ಮ ಮನೆ ಕೆಲಸ ಇಲ್ಲದಾಗ ನಾನು ಕೂಲಿ ಕೆಲಸ ಮಾಡುತ್ತೇನೆ. ನಮ್ಮ ಒಟ್ಟು ಕುಟುಂಬದಲ್ಲಿ **12** ಜನ ಇರುತ್ತೇವೆ. ವರ್ಷಕ್ಕೆ **1,00,000/-** ರಿಂದ **1,50,000/-** ನಮ್ಮ ಭೂಮಿಯಿಂದ ಆದಾಯ ಬರುತ್ತದೆ ಎಂಬ ಮಾತು ಸುಳ್ಳು ಎಂದರೆ ಸರಿಯಲ್ಲ. ಪ್ರತಿ ವರ್ಷ ಸದರಿ ಆದಾಯ ಬರುತ್ತದೆ ಎಂದು ತೋರಿಸಲು ನಾನು ನನ್ನ ಬ್ಯಾಂಕಿನ ಸ್ಟೆಂಟಮೆಂಟನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ನನಗೆ ಆದಾಯ ಇರದೇ ಇದ್ದರಿಂದ ನಾನು ಕೂಲಿ ಕೆಲಸ ಮಾಡುತ್ತೇನೆ ನಾನು ಕೂಡಿಟ್ಟ ಹಣದಿಂದ

ಆರೋಪಿತನಿಗೆ ದುಡ್ಡನ್ನು ನೀಡಿರುತ್ತೇನೆ ಹಾಗೂ ನಾನು ಕಬ್ಬು ಕಡಿಯಲು ಹೋದರೆ ಒಂದು ವರ್ಷಕ್ಕೆ **2** ಲಕ್ಷ ದುಡಿದುಕೊಂಡು ಬರುತ್ತೇನೆ. **2** ಲಕ್ಷದಲ್ಲಿ **1** ವರ್ಷಕ್ಕೆ **50,000/-** ಮನೆ ನಡೆಸುವುದಕ್ಕಾಗಿ ಖರ್ಚು ಮಾಡುತ್ತೇವೆ. ಕಬ್ಬು ಕಡಿಯಲು ಹೋದರೆ **2** ಲಕ್ಷ ಆದಾಯ ಇರುತ್ತದೆ ಎಂದು ತೋರಿಸಲು ದಾಖಲೆಗಳು ಇರುತ್ತವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೇನೆ.

**03.** ಆರೋಪಿತನು **5** ಲಕ್ಷ ಹಣವನ್ನು ನನ್ನ ಹತ್ತಿರ ಮನೆ ಕಟ್ಟಿಸಲು ತೆಗೆದುಕೊಂಡು ಹೋಗಿರುತ್ತಾನೆ ಎಂದು ಸಾಬೀತು ಮಾಡಲು ನಿವೇನಾದರೂ ಆರೋಪಿತನು ಮನೆ ಕಟ್ಟಿಸುವುದು ನೋಡಿರುತ್ತೀರಾ ಎಂದರೆ ಊರಲ್ಲಿ ಮನೆ ಕಟ್ಟಿಸಿರುತ್ತಾನೆ. ಈ ಪ್ರಕರಣದ ದೂರು ಹಾಗೂ ವಕೀಲರ ನೋಟಿಸಿನಲ್ಲಿ ಆರೋಪಿತನು ಮನೆ ಕಟ್ಟಿಸಲು ಹಣವನ್ನು ತೆಗೆದುಕೊಂಡಿರುತ್ತಾನೆ ಎಂದು ಬರೆಸಿ ಹಾಕಿರುತ್ತೀರಾ ಎಂದರೆ ಬರೆಸಿರುತ್ತೇನೆ. ಈ ರೀತಿಯಾಗಿ ಯಾವುದೇ ಬರವಣಿಗೆಯನ್ನು ನಾನು ಬರೆಸಿರುವುದಿಲ್ಲ ಎಂದರೆ ಬರೆಸಿರುತ್ತೇನೆ.

**04.** ಆರೋಪಿತನು ದುಡ್ಡು ಕೇಳಿ **2** ದಿನಕ್ಕೆ ನಾನು ಅವರಿಗೆ ದುಡ್ಡನ್ನು ನೀಡಿರುತ್ತೇನೆ. ಯಾವ ದಿನಾಂಕ ಹಾಗೂ ಇಸವಿಯಲ್ಲಿ ಆರೋಪಿತನು ನನ್ನನ್ನು ದುಡ್ಡು ಕೇಳಿರುತ್ತಾನೆ ಎಂದು ನೆನಪು ಇರುವುದಿಲ್ಲ. **1,50,000/-** ನನ್ನ ಬ್ಯಾಂಕ ಖಾತೆಯಿಂದ ಬಿಡಿಸಿಕೊಂಡು, **1,50,000/-** ಮನೆಯಲ್ಲಿ ಇದ್ದು ಇನ್ನುಳಿದ **2** ಲಕ್ಷ ರೂಪಾಯಿಗಳನ್ನು ಸಾಲವಾಗಿ ತೆಗೆದುಕೊಂಡು ಬಂದು ಒಟ್ಟು **5** ಲಕ್ಷ ರೂಪಾಯಿಗಳನ್ನು ಆರೋಪಿತನಿಗೆ ನೀಡಿರುತ್ತೇನೆ. **1,50,000/-** ನನ್ನ ಬ್ಯಾಂಕ ಖಾತೆಯಿಂದ ಬಿಡಿಸಿಕೊಂಡು ಬಂದಿದ್ದರ ಬ್ಯಾಂಕ ಖಾತೆಯ ಸ್ಟೆಂಟಮೆಂಟನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. **2** ಲಕ್ಷ ರೂಪಾಯಿಗಳನ್ನು ನಾನು ಚಂದ್ರಾನಾಯ್ಕ ತಂದೆ ಭೀಮ್ಲಾನಾಯ್ಕರವರಿಂದ ಸಾಲವಾಗಿ ಪಡೆದು ನೀಡಿರುತ್ತೇನೆ. ಕಳೆದ ವರ್ಷ ಅಂದರೆ **2024** ರಲ್ಲಿ ಚಂದ್ರಾನಾಯ್ಕರವರಿಂದ ಆರೋಪಿತನಿಗೆ ಕೊಡಲು **2** ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಬಂದಿರುತ್ತೇನೆ. ಯಾವ ದಿನಾಂಕದಂದು ಚಂದ್ರಾನಾಯ್ಕನಿಂದ ತೆಗೆದುಕೊಂಡು ಬಂದ ಹಣವನ್ನು ಆರೋಪಿತನಿಗೆ ನೀಡಿರುತ್ತೇನೆ ಎಂದು ನನಗೆ ನೆನಪು ಇರುವುದಿಲ್ಲ. ಚಂದ್ರಾನಾಯ್ಕನಿಂದ ಎಷ್ಟು ಬಡ್ಡಿಗೆ ನೀವು ಸಾಲವನ್ನು ತೆಗೆದುಕೊಂಡು ಬಂದಿರುತ್ತೀರಿ ಎಂದರೆ ಕಬ್ಬು ಕಡೆಯಲು

ಬರುತ್ತೇನೆ ಎಂದು ಸಾಲವನ್ನು ತೆಗೆದುಕೊಂಡು ಬಂದಿರುತ್ತೇನೆ. ಚಂದ್ರಾನಾಯ್ಕನು ಯಾವುದಾದರೂ ಸಕ್ಕರೆ ಖಾರ್ಖಾನೆಗೆ ಸುಫರವೈಸರ ಇರುತ್ತಾರಾ ಎಂದರೆ ಇರುವುದಿಲ್ಲ. ಚಂದ್ರಾನಾಯ್ಕನಿಂದ ಸಾಲ ತೆಗೆದುಕೊಂಡು ಬಂದು ಆರೋಪಿತನಿಗೆ ಕೊಡುವ ಅವಶ್ಯಕತೆ ಏನಿತ್ತು ಎಂದರೆ ಆರೋಪಿತನು ನಮಗೆ ಸಂಬಂಧಿಕ ಆಗಿದ್ದರಿಂದ ಸಾಲವನ್ನು ನೀಡಿರುತ್ತೇನೆ. ನಾನು ಸಲ್ಲಿಸಿದಂತಹ ದೂರು ಹಾಗೂ ವಕೀಲರ ನೋಟಿಸಿನಲ್ಲಿ ಆರೋಪಿತನು ನಮಗೆ ಸಂಬಂಧಿಕ ಎಂದು ಹೇಳಿ ಬರೆಸಿರುವುದಿಲ್ಲ. ಅದೇ ರೀತಿಯಾಗಿ ಚಂದ್ರಾನಾಯ್ಕನಿಂದ ಸಾಲ ತೆಗೆದುಕೊಂಡು ಬಂದು ಆರೋಪಿತನಿಗೆ ನೀಡಿರುತ್ತೇನೆ ಎಂದು ನನ್ನ ದೂರು ಹಾಗೂ ವಕೀಲರ ನೋಟಿಸಿನಲ್ಲಿ ಬರೆಸಿರುವುದಿಲ್ಲ.

**05. 20,000/-** ರೂಪಾಯಿಕ್ಕಿಂತ ಹೆಚ್ಚಿಗೆ ಮೊತ್ತವನ್ನು ವರ್ಗಾವಣೆ ಮಾಡಬೇಕಾದರೆ ಅದನ್ನು ಬ್ಯಾಂಕಿನ ಮುಖಾಂತರವೇ ವರ್ಗಾವಣೆ ಮಾಡಬೇಕಾಗುತ್ತದೆ ಎಂದರೆ ಸರಿ. ಮನೆಯಲ್ಲಿದ್ದ **1,50,000/-** ಹಾಗೂ ಚಂದ್ರಾನಾಯ್ಕನಿಂದ ಪಡೆದ **2,00,00/-** ಹಣವನ್ನು ನನ್ನ ಬ್ಯಾಂಕ ಖಾತೆಗೆ ಹಾಕಿ ಆರೋಪಿತನಿಗೆ ವರ್ಗಾವಣೆ ಮಾಡಲು ತೊಂದರೆ ಇರಲಿಲ್ಲ ಎಂದರೆ ತೊಂದರೆ ಇರಲಿಲ್ಲ.

ಈ ಹಂತದಲ್ಲಿ ಆರೋಪಿತನ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುತ್ತಾರೆ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

" ನನ್ನ ಸಮಕ್ಷಮ "

**Sd/-**

( ಶ್ರೀಮತಿ ಅಕ್ಷತಾ ಟಿ )
ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ. ನ್ಯಾಯಿಕ ದಂಡಾಧಿಕಾರಿಗಳು., ಹಡಗಲಿ.